1995-96 ರಲ್ಲಿ 5.00 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಹಣವನ್ನು ಇನ್ನೂ ಬಿಡುಗಡೆ ಮಾಡಿಲ್ಲ ಸದ್ಯದಲ್ಲೇ ಬಿಡುಗಡೆ ಮಾಡಲಾಗುವುದು. ಆರಾಧನಾ ಯೋಜನೆ ಹಣವನ್ನು ವಿಧಾನ ಸಭಾ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾಧಿಕಾರಿಗಳಿಗೆ ಹಂಚಿಕೆ ಮಾಡಲಾಗುವುದು. 1994-95 ರಲ್ಲಿ ಆಗ ಅಸ್ತಿತ್ವದಲ್ಲಿದ್ದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಮಿತಿಗಳನ್ನು ರದ್ದುಪಡಿಸಿ ಸರ್ಕಾರವು ವಿಧಾನ ಸಭಾ ಕ್ಷೇತ್ರವಾರು ಸಮಿತಿಗಳನ್ನು ರಚಿಸಬೇಕೆಂದು ನಿರ್ಧರಿಸಿದ್ದರಿಂದ ಆ ವರ್ಷದಲ್ಲಿ ಬಿಡುಗಡೆಯಾದ ಹಣ ಖರ್ಚಾಗಿರುವುದಿಲ್ಲ ಈ ಹಣ ಜಿಲ್ಲಾಧಿಕಾರಿಗಳ ಬಳಿ ಇದ್ದು ಪ್ರಸ್ತುತ ಸಮಿತಿಗಳ ಶಿಫಾರಸ್ಸಿನಂತೆ ಅದನ್ನು ಉಪಯೋಗಿಸಿಕೊಳ್ಳಲಾಗುವುದು.

ಆರಾಧನಾ ಯೋಜನೆಯ ಕಾರ್ಯಕ್ರಮವನ್ನು ತ್ವರಿತಗೊಳಿಸುವ ಸಲುವಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಎರಡು ಸಮಿತಿಗಳ ಬದಲಿಗೆ ವಿಧಾನ ಸಭಾ ಕ್ಷೇತ್ರಕ್ಕೆ ಒಂದೇ ಸಮಿತಿ ರಚಿಸಿದ್ದು ಈ ಸಮಿತಿಯ ಶಿಫಾರಸ್ಸಿನಂತೆ ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಮಾಡಿದ ನಂತರ ತಹಶೀಲ್ದಾರರು ಕೆಲಸವನ್ನು ನಿರ್ವಹಿಸುತ್ತಾರೆ. ಈಗಾಗಲೇ177 ವಿಧಾನ ಸಭಾ ಕ್ಷೇತ್ರಗಳ ಸಮಿತಿಗಳನ್ನು ರಚಿಸಲಾಗಿದ್ದು, ಉಳಿದ ಕ್ಷೇತ್ರಗಳ ಸಮಿತಿಗಳನ್ನು ಸಹ ರಚಿಸಲಾಗುತ್ತಿದೆ.

(ಊ) ಯಲಹಂಕ ಕ್ಷೇತ್ರಕ್ಕೆ ಒಳಪಡುವ ಪ್ರದೇಶಗಳಲ್ಲಿ ಕರ್ನಾಟಕ ಕೊಳಚೆ ನಿರ್ಮೂಲ ಮಂಡಳಿವತಿಯಿಂದ ನಿರ್ಮಾಣಗೊಳ್ಳುತ್ತಿರುವ ಮನೆಗಳು.

ಶ್ರೀ ವಿ. ಶಿವರಾಜ್ (ಯಲಹಂಕ) : ಮಾನ್ಯ ಅಧ್ಯಕ್ಷರೆ " ಯಲಹಂಕ ಮತಕ್ಷೇತ್ರಕ್ಕೆ ಒಳಪಡುವ ಸುಧಾಮನಗರ, ಕಾವಲಬೈರಸಂದ್ರ (ಎನ್.ಪಿ.ಫ್ಯಾಕ್ಟರಿ ಪಕ್ಕ) ಈ ಮೇಲ್ಕಂಡ ಸ್ಥಳಗಳಲ್ಲಿ ಕಳೆದ 1993 ರಿಂದ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ಮನೆಗಳು ಇದುವರೆವಿಗೂ ಸಹ ಕಾರ್ಯಗತವಾಗದೆ ಉಳಿದಿರುವುದಕ್ಕೆ ಕಾರಣವೇನು? ಈ ಬಗ್ಗೆ ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಕೈಗೊಳ್ಳಲಿರುವ ಕ್ರಮವೇನು" ಎಂಬುದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಯಲಹಂಕ ಕ್ಷೇತ್ರಕ್ಕೆ ಸೇರಿದ ಕಾವಲ್ ಬೈರಸಂಧ್ರ, ಎನ್.ಪಿ. ಫ್ಯಾಕ್ಟರಿ ಬಳಿ ಇರುವ ಸುಜಾನನ ನಗರ ಕೊಳಚೆ ಪ್ರದೇಶದಲ್ಲಿ ಮಂಡಳಿ ವತಿಯಿಂದ ಸುಮಾರು 100ಮನೆಗಳ ನಿರ್ಮಾಣಕ್ಕಾಗಿ ಒಟ್ಟು ರೂ. 37.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಗಳನ್ನು. 1992-93ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಮಂಡಳಿಯಿಂದ ಮಂಜೂರಾತಿಯನ್ನು ಪಡೆಯಲಾಯಿತು. ಈಗ ಮಂಡಳಿಯಲ್ಲಿ ಟಾಸ್ಕ ವರ್ಕ ವ್ಯವಸ್ಥೆಯಡಿಯಲ್ಲಿ (ತುಂಡು ಗುತ್ತಿಗೆ ಆಧಾರದ ಮೇಲೆ) ಜಾರಿಗೊಳಿಸಲಾಗಿದ್ದು ಸುಮಾರು 8 ಮಂದಿ ಗುತ್ತಿಗೆದಾರರಿಗೆ ಈ ಕೆಳಕಂಡ ಮನೆಗಳ ನಿರ್ಮಾಣ ಕಾರ್ಯವನ್ನು 1992ನೇ ನವೆಂಬರ್ ಮಾಹೆಯಲ್ಲಿ ವಹಿಸಿಕೊಡಲಾಯಿತು.

ಶ್ರೀಯುತರಾದ

1)	ಪೆದ್ದಪ್ಪ ನಾಯ್ಡು	40	ಮನೆಗಳು
2)	ಪ್ರೇಮ ಚಂದ್ರ	20	ಮನೆಗಳು
3)	ಜಯರಾಮ ರೆಡ್ಡಿ	4	ಮನೆಗಳು
4)	ಬಿ.ಕೆ.ಶ್ರೀನಿವಾಸ್	4	ಮನೆಗಳು
5)	ವಿದ್ಯಾಧರ	8	ಮನೆಗಳು
6)	ಟಿ. ಶ್ರೀನಿವಾಸ್	8	ಮನೆಗಳು
7)	ಕೃಷ್ಣಪ್ಪ	8	ಮನೆಗಳು
8)	ಚಂದ್ರಶೇಖರ	8	ಮನೆಗಳು

ಈ ಕೊಳಚೆ ಪ್ರದೇಶದ ಮಧ್ಯ ಭಾಗದಲ್ಲಿ ಮಳೆಯ ನೀರಿನ ಚರಂಡಿ ಹಾದು ಹೋಗಿದ್ದು, 2 ಬದಿಯಲ್ಲಿ ಗುಡಿಸಲುಗಳಿದ್ದವು. ಈ ಗುಡಿಸಲುಗಳನ್ನು ತೆರವು ಮಾಡಿಸಿ ಅದೇ ಜಾಗದಲ್ಲಿ ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿತ್ತು. ಸದರಿ ಗುಡಿಸಲು ನಿವಾಸಿಗಳಿಗೆ ತಾತ್ಕಾಲಿಕವಾಗಿ ನೆಲೆಸಲು ಯಾವುದೇ ಸರ್ಕಾರಿ ಖಾಲಿ ಜಾಗ ಸಿಕ್ಕದೇ ಇದ್ದುದರಿಂದ ಗುಡಿಸಲು ನಿವಾಸಿಗಳು ವಾಸವಿದ್ದ ಜಾಗದಲ್ಲಿ ಹಂತ ಹಂತವಾಗಿ ಅವರುಗಳನ್ನು ಸ್ಥಳಾಂತರಿಸಲು ಖಾಲಿ ಜಾಗವನ್ನು ಮನೆಗಳ ನಿರ್ಮಾಣ ಕಾರ್ಯವನ್ನು ಹಂತ ಹಂತವಾಗಿ ತೆಗೆದುಕೊಳ್ಳುತ್ತಾ ಬರಲಾಯಿತು. ಇದರಿಂದಾಗಿ ಒಟ್ಟು ಕಾಮಗಾರಿಗಳನ್ನು ಏಕ ಕಾಲದಲ್ಲಿ ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಇದು ಅಲ್ಲದೆ ಈ ಕೊಳಚೆ ಪ್ರದೇಶಕ್ಕೆ ಕಟ್ಟಡ ಸಾಮಾಗ್ರಿಗಳನ್ನು ಒಯ್ಯಲು ಸಂಪರ್ಕ ದಾರಿ ಅತ್ಯಂತ ಕಿರಿದಾಗಿದ್ದು ಮನೆ ನಿರ್ಮಾಣದ ಜಾಗದಲ್ಲಿಯೇ ಸಾಮಾಗ್ರಿ ವಾಹನಗಳು ಸಹ ಸಂಚರಿಸಬೇಕಾಗಿತ್ತು. ಇದು ಅಲ್ಲದೇ ಇದೇ ಸಂದರ್ಭದಲ್ಲಿ ಈ ಕಾಮಗಾರಿಗಳಿಗೆ ಅಗತ್ಯವಾದ ಕಬ್ಬಿಣ ಮತ್ತು ಸಿಮೆಂಟ್ ಹಣಕಾಸಿನ ಕೊರತೆಯಿಂದಾಗಿ ಸಕಾಲದಲ್ಲಿ ಪೂರೈಸಲು ಸಾಧ್ಯವಾಗದೇ ಇದ್ದುದು ಸಹ ಕಾಮಗಾರಿಗಳ ವಿಳಂಬಕ್ಕೆ ಒಂದು ಕಾರಣವಾಗಿದೆ. ಈ ಮಧ್ಯ ಗುತ್ತಿಗೆದಾರರು ಸಹ ಈ ಕೊಳಚೆ ಪ್ರದೇಶದಲ್ಲಿ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲು ಇರುವ ತೊಂದರೆಗಳನ್ನು ಮನಃಗೊಂಡು ಮಧ್ಯೆದಲ್ಲಿ ಕಾಮಗಾರಿಗಳನ್ನು ನಿಲ್ಲಿಸಿದ್ದುದು ಸಹ ವಿಳಂಬಕ್ಕೆ ಮತ್ತೊಂದು ಕಾರಣವಾಗಿದೆ. ಈ ನ್ಯೂನತೆಗಳು ಮಧ್ಯೆಯು ಸಹ ಸಂಬಂಧಪಟ್ಟ ಗುತ್ತಿಗೆದಾರರ ಮನಃವೊಲಿಸಿ ಕೆಲವು ಸಣ್ಣ ಪುಟ್ಟ ಸಿವಿಲ್ ಕಾಮಗಾರಿಗಳನ್ನು ಹೊರತುಪಡಿಸಿ 65 ಮನೆಗಳ ಕಾರ್ಯವನ್ನು ಸಂಪೂರ್ಣಗೊಳಿಸಿದ್ದು ಮನೆಗಳು ಹಂಚಿಕೆಗೆ ಸಿದ್ಧವಾಗಿರುತ್ತವೆ. ಈ ಮನೆಗಳ ಕಾರ್ಯವನ್ನು ಸಂಪೂರ್ಣಗೊಳಿಸಿದ್ದು ಮನೆಗಳು ಹಂಚಿಕೆಗೆ ಸಿದ್ಧವಾಗಿರುತ್ತವೆ. ಈ ಮನೆಗಳಲ್ಲಿ ಹಾಲಿ ಸಂಬಂಧಿಸಿದ ಫಲಾನುಭವಿಗಳು ವಾಸವಾಗಿರುತ್ತಾರೆ. ಉಳಿದ 35 ಮನೆಗಳ ಪೈಕಿ 19 ಮನೆಗಳನ್ನು ಗುತ್ತಿಗೆದಾರರಾದ ಶ್ರೀ ಪೆದ್ದಪ್ಪ ನಾಯ್ಡು-10 ಮನೆಗಳು, ಶ್ರೀಪ್ರೇಮ ಚಂದ್ರ-1ಮನೆ, ಶ್ರೀವಿದ್ಯಾಧರ-8 ಮನೆಗಳನ್ನು (19 ಮನೆಗಳನ್ನು) ಛಾವಣಿ ಹಂತಕ್ಕೆ ನಿರ್ಮಿಸಲಾಗಿರುತ್ತದೆ. 6 ಮನೆಗಳನ್ನು ಇಲಾಖಾ

ವತಿಯಿಂದ ಕೈಗೆತ್ತಿಕೊಳ್ಳಲಾಗಿದ್ದು ಇವುಗಳು ಸಹ ಭಾವಣಿ ಹಂತಕ್ಕೆ ಬಂದಿರುತ್ತದೆ. ಇನ್ನು 10 ಮನೆಗಳು ಸಂಪರ್ಕ ದಾರಿ ಅಭಾವದಿಂದ ಇದುವರೆವಿಗೂ ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈಗ ವಿವಿಧ ಹಂತದಲ್ಲಿರುವ 25 ಮನೆಗಳು ಪೂರ್ಣಗೊಂಡ ನಂತರ ಉಳಿದ 10 ಮನೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು. ಏಕೆಂದರೆ ಕಟ್ಟಡ ಸಾಮಾಗ್ರಿಗಳನ್ನು 25 ಮನೆಗಳು ನಿರ್ಮಿಸುವ ನಿವೇಶನದ ಮೂಲಕವೇ ಸಾಗಿಸಬೇಕಾಗಿರುತ್ತದೆ. ಈ ಮಧ್ಯ ಸಧ್ಯ 25 ಮನೆಗಳ ಕಾರ್ಯವನ್ನು ಇದುವರೆವಿಗೂ ಸುಮಾರು 22.00 ಲಕ್ಷಗಳನ್ನು ಖರ್ಚುಮಾಡಲಾಗಿದ್ದು, ಇನ್ನುಳಿದ 25 ಮನೆಗಳನ್ನು 1996ನೇ ವರ್ಷದ ಜೂನ್ ಅಂತ್ಯದಲ್ಲಿ ಪೂರ್ಣಗೊಳಿಸಾಗುವುದೆಂದು ಕಾರ್ಯಪಾಲಕ ಅಭಿಯಂತರರು ವರದಿ ಮಾಡಿರುತ್ತಾರೆ. ಇದುವರೆವಿಗೂ ಕೈಗೆತ್ತಿಕೊಳ್ಳಲು ಆಗದೇ ಇರವ 10 ಮನೆಗಳ ನಿರ್ಮಾಣ ಕಾರ್ಯವನ್ನು ಸಂಬಂಧಪಟ್ಟ ಫಲಾನುಭವಿಗಳ ಮೂಲಕ ಕಾರ್ಯರೂಪಕ್ಕೆ ತರಲು ಉದ್ದೇಶಿಸಲಾಗಿದೆ. ಇದನ್ನು ಆದಷ್ಟು ಬೇಗ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

(ಋ) ಕಾಮ ಕ್ಷೇತ್ರದ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾರ್ಯಗಳ ಕುಂಠಿತಗೊಂಡಿರುವ ಬಗ್ಗೆ.

ಶ್ರೀ ವಸಂತ ವಿ. ಸಾಲಿಯಾನ(ಕಾಪು ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ 1995ರಿಂದ ಹೊಸ ಸರ್ಕಾರ ಬಂದ ನಂತರ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳು, ಜಿಲ್ಲಾ ಪಂಚಾಯಿತಿ ಕಾಮಗಾರಿಗಳು, ಮಲೆನಾಡು ಅಭಿವೃದ್ಧಿ ಕಾಮಗಾರಿಗಳು, ಮೀನುಗಾರಿಕಾ ಇಲಾಖೆಯ ಅಭಿವೃದ್ಧಿಕಾಮಗಾರಿಗಳು, ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳು ಸ್ಥಗಿತಗೊಂಡಿವೆ. ಈ ಎಲ್ಲಾ ಅಭಿವೃದ್ಧಿ ಕಾಮಗಾರಿಗಳಿಗೆ ಡಾಮರಿನ ಸಿಮೆಂಟಿನ ಮತ್ತು ಕಬ್ಬಿಣದ ಕೊರತೆ ಮತ್ತು ಸೂಕ್ತ ಅನುಧಾನ ಬಿಡುಗಡೆ ಮಾಡದ ಕಾರಣ ಸ್ಥಗಿತಗೊಂಡಿವೆ. ಶಾಸಕರ ಅನುದಾನದ 30 ಲಕ್ಷ ರೂ.ಗಳ ಕಾಮಗಾರಿಗಳು 1995ರಿಂದ 1996ವರೆಗೆ ಪ್ರಾರಂಭವಾಗಲಿಲ್ಲ. ಈ ಬಗ್ಗೆ ಸರ್ಕಾರ ಕೂಡಲೆ ಪರಿಶೀಲಿಸಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ, ಡಾಂಬರ್ ಕಬ್ಬಿಣ, ಸಿಮೆಂಟುಗಳನ್ನು ಒದಗಿಸಿ ಮಳೆಗಾಲ ಪ್ರಾರಂಭವಾಗುವ ಮೊದಲು ಮುಗಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) (ಲೋಕೋಪಯೋಗಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

ಮಾನ್ಯ ಸದಸ್ಯರು ಕಾಪು ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳು, ಜಿಲ್ಲಾ ಪಂಚಾಯತ್ ಕಾಮಗಾರಿಗಳು, ಮಲೆನಾಡು ಅಭಿವೃದ್ಧಿ ಕಾಮಗಾರಿಗಳು, ಮೀನುಗಾರಿಕೆ ಇಲಾಖೆ ಅಭಿವೃದ್ಧಿ ಕಾಮಗಾರಿಗಳು, ಸಣ್ಣ ನೀರಾವರಿ ಇಲಾಖೆ ಕಾಮಗಾರಿಗಳು ಸ್ಥಗಿತಗೊಂಡಿದೆ ಎಂದು ಹೇಳಿರುತ್ತಾರೆ. ಈ ವಿಚಾರದಲ್ಲಿ ಜಿಲ್ಲಾ ಪಂಚಾಯತ್‌ನ ಕಾಮಗಾರಿಗಳು ಪಂಚಾಯತರಾಜ್ ಇಲಾಖೆಯ ಆಡಳಿತಾತ್ಮಕ ವ್ಯಾಪ್ತಿಯಲ್ಲಿಯೂ, ಮಲೆನಾಡು ಅಭಿವೃದ್ಧಿ ಕಾಮಗಾರಿಗಳು ಯೋಜನಾ ಇಲಾಖೆಯ ಆಡಳಿತಾತ್ಮಕ ವ್ಯಾಪ್ತಿಯಲ್ಲಿಯೂ, ಮೀನುಗಾರಿಕೆ ಇಲಾಖೆಯ ಕಾಮಗಾರಿಗಳು ಮೀನುಗಾರಿಕೆ